## Employees at Copper Mines at Kalyadi Village

570 SRI HARANAHALLY RAMASWAMY (Gandasi)—Will the Minister for Industries and Commerce be pleased to state :—

(a) the number of employees at the Copper Mines at Kalyadi Village, Arasikere Taluk ;

(b) the rate of wages being paid to the different categories of workers ;

(c) whether there is a proposal to have a processing centre at the mines ?.

SRI K.H. RANGANATH (Minister for Agriculture and Parliamentary Affairs) [on behalf of] SRI D. DEVARAJ URS (Chief Minister):—

(a) Two hundred and seven.

(b) 1 Unskilled :

Between Rs. 169 to Rs. 175 per mensem ;

2 Semi-skilled :
Between Rs. 196 to Rs 227 to per mensem.

3 Skilled :

Between Rs. 227 to Rs. 299 per mensem.

(c) Yes.

ಶ್ರೀ ಮಳ್ಳೂರು ಆನಂದರಾವ್ : ಸ್ವಾಮಿ, ಮುಖ್ಯಮಂತ್ರಿಗಳು ಸಭೆಗೆ ಬರದಿರುವುದಕ್ಕೆ ಕಾರಣ ಕೊಟ್ಟು ತಿಳಿಸಿದ್ದಾರೆಯೇ ?

ಅಧ್ಯಕ್ಷರು :—ಹೌದು.

ಶ್ರೀ ಹಾರನಹಳ್ಳಿ ರಾಮಸ್ವಾಮಿ :—ಇಲ್ಲಿ ಗಣಿ ಕೆಳಗೆ ಕೆಲಸ ಮಾಡುವ ನೌಕರರಿಗೆ ಬೇರೆ ಕಡೆಗಳಲ್ಲಿ ಕೊಡುತ್ತಿರುವುದಕ್ಕಿಂತ ಕಡಿಮೆ ಕೂಲಿ ಕೊಡಲು ಕಾರಣವೇನು?

ಶ್ರೀ ಕೆ. ಎಚ್. ರಂಗನಾಥ್ :—ಇಲ್ಲಿ ನಾವು ಬೇರೆ ಗಣಿಗಳಲ್ಲಿ ಕೊಡುತ್ತಿರುವುದಕ್ಕಿಂತ ಕಡಿಮೆ ಕೊಡುತ್ತಿಲ್ಲ. ಕೇಂದ್ರಸರ್ಕಾರದ ೧೯೬೬ನೇ ಇಸವಿಯ ಮಿನಿಮಮ್ ವೇಜಸ್ ಆಕ್ಟ್ ಪ್ರಕಾರ ನುರಿತರಲ್ಲದ ಕೆಲಸಗಾರರಿಗೆ ೫ ರೂ. ೮೦ ಪೈಸೆಯಂತೆ, ಅರೆ ನುರಿತ ಕೆಲಸಗಾರರಿಗೆ ೭ ರೂ. ೨೫ ಪೈಸೆಯಂತೆ ಹಾಗೂ ನುರಿತ ಕೆಲಸಗಾರರಿಗೆ ೮ ರೂ. ೭೦ ಪೈಸೆಯಂತೆ ಕೊಡುತ್ತೇವೆ. ಚಿತ್ರದುರ್ಗ ಕಾಪರ್ ಕಂಪನಿಯಲ್ಲಿ ಅರೆನುರಿತ ಕೆಲಸಗಾರರಿಗೆ ೭ ರೂ. ೨೫ ಪೈಸೆಯಿಂದ ಹಿಡಿದು ೮ ರೂ ೭೫ ಪೈಸೆವರೆಗೆ ಕೊಡಲಾಗುತ್ತಿದೆ. ನುರಿತ ಕೆಲಸಗಾರರಿಗೆ ೯ ರೂ. ೮೦ ಪೈಸೆಯಿಂದ ಹಿಡಿದು ೧೨ ರೂ. ೫೦ ಪೈಸೆವರೆಗೆ ಕೊಡಲಾಗುತ್ತಿದೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ : ಚಿತ್ರದುರ್ಗ ಕಾಪರ್ ಕಂಪನಿಯಲ್ಲಿ ಕೊಡುತ್ತಿರುವುದಕ್ಕಿಂತ ಕಡಿಮೆ ಕೂಲಿಯನ್ನು ಇಲ್ಲಿ ಕೊಡಂತ್ತಿರುವುದಕ್ಕೆ ಕಾರಣವೇನು ?

ಶ್ರೀ ಕೆ. ಎಚ್. ರಂಗನಾಥ್ :—ಅದು ಪ್ರೊಡಕ್ಷನ್‌ನಲ್ಲಿದೆ, ಇದು ಪ್ರೊಡಕ್ಷನ್‌ನಲ್ಲಿ ಇಲ್ಲ.

ಶ್ರೀ ಹಾರನಹಳ್ಳಿ ರಾಮಸ್ವಾಮಿ :—ಇದು ಪ್ರಾರಂಭವಾಗಿ ೫-೬ ವರ್ಷಗಳಾಯಿತು. ಆದರಕ್ಕೆ ಇಷ್ಟೊಂದು ಕಡಿಮೆ ಕೊಡಲು ಕಾರಣವೇನು ? ಗಣಿಯಲ್ಲಿ ಕೆಲಸ ಮಾಡುವವರಿಗೆ ಒಂದು ದಿವಸೂ

೫ ರೂ. ಕೊಟ್ಟರೆ ಹೇಗೆ ? ಕಾರಣ ಕೇಳಿದರೆ, ಇದು ಇನ್ನೂ ಪ್ರಾಜೆಕ್ಟ್ ಸ್ಟೇಜ್‌ನಲ್ಲಿದೆ ಎಂದು ಹೇಳುತ್ತಾರೆ ? ಅಂದರೆ ಅವರು ಗಲಾಟೆ ಮಾಡದ ಹೊರತು ಜಾಸ್ತಿ ಮಾಡಲು ಸಾಧ್ಯವಿಲ್ಲವೇ ?

ಶ್ರೀ ಕೆ.ಚ್. ರಂಗನಾಥ್ :—ಇದು ಕಮರ್ಷಿಯಲ್ ಪ್ರೊಡಕ್ಷನ್‌ಗೆ ಇನ್ನೂ ಬಂದಿಲ್ಲ. ಬಂದ ಮೇಲೆ ಹೆಚ್ಚು ಕೊಡಲು ಯೋಚನೆ ಮಾಡಬಹುದು. ಮಾನ್ಯ ಸದಸ್ಯರು ತಿಳಿದಂತೆ ಚಿತ್ರದುರ್ಗ ಕಾಪರ್ ಕಂಪನಿಯೂ ಸಹ ಲಾಭದಾಯಕವಾಗಿಲ್ಲ. ನಮ್ಮಿಂದ ಕೇಂದ್ರದವರು ಪಡೆದುಕೊಂಡ ತಾಮ್ರಕ್ಕೆ ಏನು ಬೆಲೆ ತೆಗೆದುಕೊಳ್ಳುತ್ತಾರೋ, ಅದನ್ನೇ ನಮಗೆ ಕೊಡುವುದಿಲ್ಲ. ಇದರಿಂದಾಗಿ ಕೇಂದ್ರ ಸರ್ಕಾರದವರು ನಮ್ಮಿಂದಲೇ ಲಾಭ ಮಾಡುವ ಪರಿಸ್ಥಿತಿ ಬಂದಿದೆ. ಈ ತಾಮ್ರದ ಗಣಿ ಕಮರ್ಷಿಯಲ್ ಪ್ರೊಡಕ್ಷನ್‌ಗೆ ಬಂದ ನಂತರ ಕೂಲಿ ಹೆಚ್ಚು ಮಾಡುವುದನ್ನು ಯೋಚನೆ ಮಾಡಬಹುದು.

ಶ್ರೀ ಹಾರನಹಳ್ಳಿ ರಾಮಸ್ವಾಮಿ :— ನನ್ನ ಕೊನೆಯ ಪ್ರಶ್ನೆಗೆ ಉತ್ತರವಾಗಿ 'ಹೌದು' ಎಂದು ಹೇಳಿದ್ದೀರಿ. ಅಂದರೆ ಇದರ ಸ್ವರೂಪವೇನು. ಇದಕ್ಕೆ ಖರ್ಚು ಎಷ್ಟಾಗುತ್ತದೆ ಮತ್ತು ಯಾವಾಗ ಇದು ಪ್ರಾರಂಭವಾಗುತ್ತದೆಂಬುದನ್ನು ತಿಳಿಸುತ್ತೀರಾ ?

SRI K.H. RANGANATH :—Sir orders have been placed for erection of processing plant. ಆ ಸ್ಟೇಜ್‌ನಲ್ಲಿದೆ.

ಶ್ರೀ ಹಾರನಹಳ್ಳಿ ರಾಮಸ್ವಾಮಿ :—ಇದಕ್ಕೆ ಸಂಬಂಧಪಟ್ಟಂತೆ ಮಿಷಿನರಿ ಆರ್ಡರ್ ಕೊಟ್ಟಿದ್ದಾರೆಂದು ಹೇಳುತ್ತಾರೆ ; ಅದು ನಿಜವೇ ? ಮತ್ತು ಯಾವಾಗ ಪ್ರಾರಂಭವಾಗುತ್ತದೆ.

ಶ್ರೀ ಕೆ. ಎಚ್. ರಂಗನಾಥ್ :—ಆ ಮಾಹಿತಿ ಈಗ ನನ್ನ ಪತ್ತಿರವಿಲ್ಲ, ಅದನ್ನು ನಾನು ತಮಗೆ ಒದಗಿಸುತ್ತೇನೆ.

## Entertainment expenses in VISL, Bhadravathi

620 SRI C.M. IBRAHIM, (Shivajinagar)— W the Minister for Industries and Commerce be pleased to state :—

(a) What have been the amounts spent by the Managing Director of VISL as entertainment expenses for each year of the 5 years ending 31st March, 1977 ; these details may be furnished along with the following :

(i) the authorised/sanctioned amounts which the Managing Director could spend towards entertainment ;

(ii) the amounts spent yearwise for buying foreign liquor for the enterainment by the Managing Dire tor ;

(iii) are these expenditure being booked to other Head of Accounts other than entertainment expenses ?

SRI AZEEZ SAIT (Minister for Industries)

(a) The following amounts were spent by the Managing Director as entertainment expenses for each year of the five years ending 31-2-1977 :

| Year | | Amount |
|---|---|---|
| 1972-1973 | ... | Rs. 4,263 |
| 1973-1974 | ... | 4,431 |
| 1974-1975 | ... | 3,000 |
| 1975-1976 | ... | 3,000 |
| 1976-1977 | ... | 3,413 |